ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ಮೂಡಿಗೆರೆ

ಸಿ.ಸಿ.ನಂಃ **1108/2023**

ಪಿರ್ಯಾದಿ : ಮೆಸರ್ಸ್ ಸಾಲ್ಡಾನ ಇಂಟರ್ ನ್ಯಾಷನಲ್
ಪಾರ್ಟನರ್ಶಿಪ್ ಫರ್ಮ್, ಕೆ.ಎಂ. ರಸ್ತೆ,
ಮೂಡಿಗೆರೆ ಟೌನ್ ಮತ್ತು ಅಂಚೆ,
ಮೂಡಿಗೆರೆ ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ.
ಪ್ರತಿನಿಧಿಸುವವರುಃ ಮ್ಯಾನೇಜಿಂಗ್ ಪಾರ್ಟ್ನರ್,
ಮಿ.ನೋರ್ಬೆರ್ಟ್ ಸಾಲ್ಡಾನ,
ವಯಸ್ಸುಃ 69 ವರ್ಷ, ಬಿನ್ ಲೇಟ್ ಬಿ.ಎ.ಸಾಲ್ಡಾನ,
ವಾಸಃ ಕುಂದೂರು ಗ್ರಾಮ ಮತ್ತು ಅಂಚೆ,
ಮೂಡಿಗೆರೆ ತಾಲ್ಲೂಕು.

ವಿರುದ್ಧ

ಆರೋಪಿ : ಶ್ರೀ ಕೆ.ಇ.ಕೆಂಚೇಗೌಡ,
ವಯಸ್ಸು ಸುಮಾರು 60 ವರ್ಷ,
ಬಿನ್ ಲೇಟ್ ಈರೇಗೌಡ,
ವಾಸಃ ಕೋಡೆಗದ್ದೆ, ಕುಂದೂರು ಅಂಚೆ,
ಮೂಡಿಗೆರೆ ತಾಲ್ಲೂಕು.

*****

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿ ಹೇಳಿಕೆ

ಪ್ರಶ್ನೆ.1) ಫಿರ್ಯಾದುದಾರರ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಆರೋಪಿಯ ಉತ್ತರಃ

ಪ್ರಶ್ನೆ.2) ಪ್ರಾಸಾ-1 ಮಿ.ನೋರ್ಬೆರ್ಟ್ ಸಾಲ್ಡಾನ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯಾದ ನೀವು ಪಿರ್ಯಾದಿ ಸಂಸ್ಥೆಯ ಗ್ರಾಹಕರಾಗಿದ್ದು, ಹಲವಾರು ವರ್ಷಗಳಿಂದ ಕಾಫಿಬೀಜವನ್ನು ಮಾರಾಟ ಮಾಡಲು ಮುಂಗಡವನ್ನು ತೆಗೆದುಕೊಳ್ಳುತ್ತಿದ್ದು, ಸದರಿ ಸಂಸ್ಥೆಯೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿ, ದಿಃ 26.03.2021 ರಂದು ಕಾಫಿಬೀಜವನ್ನು ನೀಡುವುದಾಗಿ ಭರವಸೆ ನೀಡಿ, ಪಿರ್ಯಾದಿ ಸಂಸ್ಥೆಯಿಂದ ರೂ.12,19,201/- ಹಣವನ್ನು ಮುಂಗಡವಾಗಿ ಪಡೆದುಕೊಂಡಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ

ಪ್ರಶ್ನೆ.3) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಕಾಫಿಬೀಜವನ್ನು ಪೂರೈಸಲು ನೀವು ವಿಫಲರಾದ ಕಾರಣ, ಸದರಿ ಮುಂಗಡ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ನಿಮ್ಮ ಖಾತೆ

ಹೊಂದಿರುವ ಕರ್ನಾಟಕ ಬ್ಯಾಂಕ್, ಬಣಕಲ್ ಶಾಖೆಯ ಚೆಕ್ 538801, ದಿನಾಂಕ 20.06.2023, ರೂ.12,19,201/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಫಿರ್ಯಾದಿಯು ಸದರಿ ಶಾಖೆಯಲ್ಲಿ ಜಮೆಗಾಗಿ ಸಲ್ಲಿಸಿದಾಗ "ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ" (Funds Insufficient) ಎಂದು ದಿನಾಂಕಃ 20.06.2023 ರಂದು ಹಿಂಬರಹದ ಮೂಲಕ ಹಿಂದಿರುಗಿಸಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ

ಪ್ರಶ್ನೆ.4) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ದಿನಾಂಕಃ 26.06.2023 ರಂದು ನಿಮಗೆ ಕಾನೂನುಬದ್ಧ ನೋಟೀಸು ನೀಡಿದ್ದು, ಸದರಿ ನೋಟೀಸನ್ನು ನೀವು ದಿನಾಂಕಃ 30.06.2023 ರಂದು ಸ್ವೀಕರಿಸಿದ್ದರೂ ಸಹ ಹಣವನ್ನು ಪಾವತಿ ಮಾಡಿರುವುದಿಲ್ಲ ಮತ್ತು ಆ ನೋಟೀಸಿಗೆ ಯಾವುದೇ ಉತ್ತರ ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ

ಪ್ರಶ್ನೆ.5) ಪ್ರಾಸಾ-2 ಹರೀಶ್ ಹೆಚ್.ಜಿ. ರವರು ತಮ್ಮ ಸಾಕ್ಷ್ಯದಲ್ಲಿ ಪಿರ್ಯಾದಿ ಸಂಸ್ಥೆಯ ಪರವಾಗಿ ಈಗಾಗಲೇ ಸಂಸ್ಥೆಯ ಮೃತ ವ್ಯವಸ್ಥಾಪಕ ಪಾಲುದಾರರು ಪಿ.ಡಬ್ಲ್ಯೂ-1 ಎಂದು ಸಾಕ್ಷ್ಯ ನುಡಿದಿದ್ದು ಅವರು ಮೃತರಾದ ಕಾರಣ ಅವರ ಪರವಾಗಿ ಸದರಿ ಸಂಸ್ಥೆಯ ವ್ಯವಸ್ಥಾಪಕ ಪಾಲುದಾರರಾಗಿ ಮುಂದುವರೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ

ಪ್ರಶ್ನೆ.6) ನಿಮಗೆ ಈ ಪ್ರಕರಣದ ಬಗ್ಗೆ ನ್ಯಾಯಾಲಯಕ್ಕೆ ಏನಾದರೂ ಹೇಳುವುದು ಇದೆಯೇ ?

ಆರೋಪಿಯ ಉತ್ತರಃ

ಪ್ರಶ್ನೆ.7) ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಆರೋಪಿಯ ಉತ್ತರಃ

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತನಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ದೃಢಪಡಿಸಿಕೊಳ್ಳಲಾಗಿದೆ)

Sd/-
ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ
ನ್ಯಾಯಾಲಯ, ಮೂಡಿಗೆರೆ.

ಮೂಡಿಗೆರೆ.
ದಿನಾಂಕಃ 21.08.2025.

ಆರೋಪಿಯ ಸಹಿಃ